**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,ಯವರ ನ್ಯಾಯಾಲಯ**
**ಟಿ.ನರಸೀಪುರ**

**ಸಿಸಿ ನಂಃ 189/2024**

**ಡಿ.ಡಬ್ಲ್ಯೂ-3**

| | | |
|---|---|---|
| ಸಾಕ್ಷಿದಾರರ ಹೆಸರು | : | ನಾಗೇಂದ್ರ |
| ತಂದೆಯ ಹೆಸರು | : | ಮಹದೇವಪ್ಪ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಉಕ್ಕಲಗೆರೆ ಗ್ರಾಮ. |

**ಸಾಕ್ಷಿಗೆ ದಿನಾಂಕಃ 22.01.2026 ರಂದು ಪ್ರಮಾಣ ಮಾಡಿಸಲಾಯಿತು.**
**ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದ:**

ನಾನು, ಪಿರ್ಯಾದಿ ಹಾಗೂ ಆರೋಪಿಯು ಒಂದೇ ಗ್ರಾಮದವರು. ಆರೋಪಿಗೆ ರೂ.10,000/- ಗಳ ಸಾಲದ ಅವಶ್ಯಕತೆ ಇತ್ತು. ಅದನ್ನು ಪಿರ್ಯಾದಿಯ ಬಳಿ ಹೇಳಿರುತ್ತಾರೆ. ಪಿರ್ಯಾದಿಯು ಬೇರೆಯವರನ್ನು ಕರೆದುಕೊಂಡು ಬಂದರೆ ಕೊಡುವುದಾಗಿ ಹೇಳಿರುತ್ತಾರೆ. ನನ್ನನ್ನು ಹಾಗೂ ರುದ್ರಸ್ವಾಮಿ ರವರನ್ನು ಆರೋಪಿಯು ಕರೆದುಕೊಂಡು ಹೋಗಿರುತ್ತಾರೆ. ನಾವುಗಳು ಪಿರ್ಯದಿಯನ್ನು ಹಣವನ್ನು ಕೊಡುವಂತೆ ಹೇಳಿರುತ್ತೇವೆ. ಪಿರ್ಯಾದಿಯು ರೂ.10,000/- ಗಳಿಗೆ ಚೆಕ್ ನ್ನು ಆರೋಪಿಗೆ ನೀಡಿರುತ್ತಾರೆ. ನಂತರ ಆರೋಪಿಯು ಪಿರ್ಯಾದಿಯ ಬಳಿ ರೂ.90,000/-ಗಳನ್ನು ಕೇಳಿರುತ್ತಾರೆ. ನಂತರ ಆರೋಪಿಯು ಪಿರ್ಯಾದಿಗೆ ಚೆಕ್ ನ್ನು ನೀಡಿರುತ್ತಾರೆ. ನಂತರ ಆರೋಪಿಯು ಚೆಕ್ ನ್ನು ಪಿರ್ಯಾದಿಯಿಂದ ಕೇಳಿದ್ದು, ಚೆಕ್ ನ್ನು ಪಿರ್ಯಾದಿ ನೀಡಿರುವುದಿಲ್ಲ. ನಂತರ ಪಿರ್ಯಾದಿಯು ಆರೋಪಿಗೆ ನೋಟಿಸನ್ನು ನೀಡಿರುತ್ತಾರೆ. ನೋಟಿಸು ನೀಡಿದ ನಂತರ ನಾವುಗಳು ಪಿರ್ಯಾದಿಯನ್ನು ಭೇಟಿ ಮಾಡಿ ಚೆಕ್ ನ್ನು ವಾಪಸ್ಸು ನೀಡುವಂತೆ ಕೇಳಿಕೊಂಡಾಗ ಅವರು ಒಪ್ಪಿರುತ್ತಾರೆ.

(ಪಿರ್ಯಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು.)

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ಟಿ.ನರಸೀಪುರ**